ಕಟ್ಟಿದೆ. ಪ್ರಾಣ ಹಾರಿ ಹೋಗಿದೆ. ಮೊದಲೇ ನೋಡಿದ್ದರೆ ಬದುಕಿಸಬಹುದಿತ್ತು. ಅಥವಾ ಪ್ರಜ್ಞೆ ತಪ್ಪಿದ್ದರೂ ನೀರಿನ ಕಡೆ ಬೀಳದಿದ್ದರೆ ಜೀವ ಉಳಿಯುತ್ತಿತ್ತು. ಇವೆಲ್ಲಾ ಸೇರಿದ ಜನ ಅವರವರಲ್ಲಿ ಮಾತಾಡಿಕೊಂಡ, ಊಹಿಸಿಕೊಂಡ ಸಂಗತಿ. ಮಗ ತಮ್ಮೆಲ್ಲರ ಕೈಬಿಟ್ಟು ಹೋಗಿಯೇ ಬಿಟ್ಟಿದ್ದಾನೆಂಬ ಸತ್ಯ ಗೊತ್ತಾಗುತ್ತಿದ್ದಂತೆ ಸೀತಾಲಕ್ಷ್ಮಿ ಪ್ರಜ್ಞೆ ಕಳೆದುಕೊಂಡಿದ್ದಳು. ಶಿವರಾಮ ಕಿಂಕರ್ತವ್ಯವಿಮೂಢನಂತೆ ಕುಸಿದು ಕೂತಿದ್ದ. ಯಾರೋ ಬಂದು ಅವನ ಬಗಲಲ್ಲಿ ಕೂತರು. ಸಂತೈಸುವಂತೆ ಹೆಗಲ ಮೇಲೆ ಕೈಯಿಟ್ಟರು. ದುಃಖವೇ ಮೈವೆತ್ತಂತೆ ಕೂತಿದ್ದ ಶಿವರಾಮ ತಲೆಯೆತ್ತಿ ಪಕ್ಕಕ್ಕೆ ನೋಡಿದವನೇ ಸಿಡಿಲು ಹೊಡೆದವನಂತೆ ಎದ್ದು ನಿಂತ.

‘ನೀನ್ಯಾಕೆ ಬಂದೆ? ಮೊದಲು ನನ್ನ ಕಣ್ಣ ಮುಂದಿಂದ ತೊಲಗು. ಇಲ್ಲಾಂದ್ರೆ ನಾನು ಏನು ಮಾಡ್ತೀನೋ ನಂಗೇ ಗೊತ್ತಿಲ್ಲ...’ ಎನ್ನುತ್ತಾ ತಮ್ಮನನ್ನು ಶಕ್ತಿ ಬಿಟ್ಟು ಬಲವಾಗಿ ದೂಡಿದ. ವೆಂಕಟರಾಮು ಮತ್ತೆ ಅರೆಗಳಿಗೆ ಅಲ್ಲಿ ನಿಲ್ಲಲಿಲ್ಲ. ಮುಖ ಕೆಳಗೆ ಹಾಕಿಕೊಂಡು ಅಲ್ಲಿಂದ ಜಾಗ ಖಾಲಿ ಮಾಡಿದ. ಈ ಹೊತ್ತಿನಲ್ಲೂ ಇಷ್ಟು ದ್ವೇಷವೇ? ಎಂದು ಜನ ಅಚ್ಚರಿಪಟ್ಟರೆ, ಶಿವರಾಮನ ತಲೆಯಲ್ಲಿ ಗಿರಗಿಟ್ಟೆ ಹೊಡೆಯುತ್ತಿದ್ದ ವಿಚಾರವೇ ಬೇರೆ. ತಾನಾಗಿ ಕಾಲು ಜಾರಿ ಬಿದ್ದು ಸತ್ತಿದ್ದಲ್ಲ ಮಗ. ದಾಯಾದಿಗಳು ಹೊಡೆದು ಹಾಕಿದ್ದು. ಹೊಡೆದು ಹಾಕಿದ್ದು. ಹೊಡೆದು ಹಾಕಿದ್ದು

***

ಅಸಹಜ ಮರಣದ ಕುರಿತು ನೆರೆದವರಲ್ಲೊಬ್ಬರು ಪೊಲೀಸರಿಗೆ ಸುದ್ದಿ ಮುಟ್ಟಿಸಿದರು. ಮುಂದೆ ನಡೆಯಬೇಕಾದ್ದೆಲ್ಲಾ ಕಾನೂನುಬದ್ಧವಾಗಿ ನಡೆಯಿತು. ಪೊಲೀಸ್ ವ್ಯಾನ್ ಬಂತು. ಆ್ಯಂಬುಲೆನ್ಸ್ ಬಂತು. ಸ್ಥಳದ ಮಹಜರು ನಡೆಯಿತು. ಪೋಸ್ಟ್ ಮಾರ್ಟಂಗೆ ಶರೀರ ರವಾನಿಸಲ್ಪಟ್ಟಿತು. ತಮ್ಮನನ್ನು ಕಂಡು ಅಬ್ಬರಿಸಿದ್ದ ಶಿವರಾಮ ಈಗ ಜೀವಂತ ಶವದಂತೆ ಕಾಣುತ್ತಿದ್ದ. ಯಾರು ಏನು ಹೇಳಿದರೆ ಅದನ್ನು ಅನುಸರಿಸುತ್ತಿದ್ದ. ತಾಲ್ಲೂಕಾಸ್ಪತ್ರೆಯ ಶವಾಗಾರದ ಹೊರಗೆ ಶಿವರಾಮನಿಗೆ ಊರಿನ ಕೆಲವರು ಜೊತೆ ಕೊಟ್ಟಿದ್ದರು. ಬಿಳಿ ಬಟ್ಟೆಯಲ್ಲಿ ಬಿಗಿದು ಸುತ್ತಿದ್ದ ಪ್ರದೀಪನ ದೇಹವನ್ನು ಮನೆ ಮುಂದೆ ಆ್ಯಂಬುಲೆನ್ಸ್‌ನಿಂದ ಇಳಿಸುವಾಗ ಸೀತಾಲಕ್ಷ್ಮಿಗೆ ಪ್ರಜ್ಞೆ ಮರುಕಳಿಸಿತ್ತು. ಅವಳ ರೋದನ ಅಷ್ಟು ದೂರಕ್ಕೆ ಕೇಳಿಸುತ್ತಾ ಎಲ್ಲರ ಕಣ್ಣನ್ನು ಒದ್ದೆ ಮಾಡುತ್ತಿತ್ತು. ಅತ್ತ ಹಿರಿ ಮಗ ಪ್ರಸನ್ನ ಬೆಂಗಳೂರಿನಿಂದ ಹೊರಟು ಇನ್ನೇನು ಊರು ತಲುಪುವುದರಲ್ಲಿದ್ದ, ತಮ್ಮನಿಗೆ ಅಂತಿಮ ವಿದಾಯ ಹೇಳಲು.

***

ನೀರಲ್ಲಿ ಮುಳುಗಿ ಉಸಿರು ಕಟ್ಟಿದ್ದು ಒಂದು ಕಾರಣ, ಪಕ್ಕೆಲುಬಿನಲ್ಲಿ ಆದ ಆಳದ ಗಾಯದಿಂದ ವಿಪರೀತ ರಕ್ತಸ್ರಾವವಾಗಿದ್ದು ಮತ್ತೊಂದು ಕಾರಣ. ಇದೊಂದು ಅಸಹಜ ಮರಣ ಎಂದು ಪೊಲೀಸ್ ರೆಕಾರ್ಡಿನಲ್ಲಿ ದಾಖಲಿಸಲ್ಪಟ್ಟಿತು. ಯಾರು ಏನು ಹೇಳಿದರೂ, ತಲೆ ಕಡಿದು ಮುಂದಿಟ್ಟರೂ, ಕೇಳುವ ಸ್ಥಿತಿಯಲ್ಲಿರಲಿಲ್ಲ ಶಿವರಾಮ. ತಮ್ಮನಿಂದ ದುಡ್ಡು ತಿಂದು ಕೇಸು ಮುಚ್ಚಿ ಹಾಕಿದ್ದಾರೆ ಎಂದು ಅವನು ಯಾವ ಅಳುಕೂ ಇಲ್ಲದೆ ಹೇಳಿಕೊಂಡು ತಿರುಗುತ್ತಿದ್ದ. ಪ್ರದೀಪ ಗಟ್ಟಿಮುಟ್ಟಾದ ಹುಡುಗ. ಕಾಲು ಜಾರಿ ಬಿದ್ದಿದ್ದರೂ, ಕತ್ತಿಯೇಟು ತಗುಲಿದರೂ, ಬೀಳುತ್ತಿದ್ದಂತೆ ಅವನು ಪ್ರಜ್ಞೆ ತಪ್ಪುವುದು, ಅದರಲ್ಲೂ ತಲೆಯ ಭಾಗ ನೀರಿನಲ್ಲಿ ಮುಳುಗಿ ಹೋಗುವಂತೆ ಬೀಳುವುದು, ಶಿವರಾಮನ ಮಟ್ಟಿಗೆ ಕಟ್ಟುಕತೆ. ಹೊಟ್ಟೆಕಿಚ್ಚಿನಿಂದ ಉರಿದು ಬೀಳುತ್ತಿದ್ದ ದಾಯಾದಿಗಳು ಹೊಂಚು ಹಾಕಿ ಮಗನ ಕತೆ ಮುಗಿಸಿಬಿಟ್ಟಿದ್ದಾರೆ ಎಂದು ಅವನು ನಂಬಿಬಿಟ್ಟಿದ್ದ. ಅಹಿರಾವಣ, ಮಹಿರಾವಣನಂತಹ ಇಬ್ಬರು ಮಕ್ಕಳು ತಮ್ಮನಿಗಿದ್ದಾರೆ. ಮನೆಯಲ್ಲೇ ಕೂತು ತಿಂದು ತಿಂದು ಕೊಬ್ಬಿದ್ದಾರೆ. ಅಣ್ಣನ ಮಗ ಒಳ್ಳೇ ಓದು ಓದಿ ಕೆಲಸ ಹುಡುಕಿಕೊಂಡುಬಿಟ್ಟ. ಇವೆಲ್ಲಾ ವೆಂಕಟರಾಮನ ಕಣ್ಣಲ್ಲಿ ಚುಚ್ಚುತ್ತಿದ್ದರೆ ಆಶ್ಚರ್ಯವಿಲ್ಲ. ಅರೀತೀವಿ ಮದ್ದು... ಎಂದು ಯಾವತ್ತಿನಿಂದ ಪ್ಲಾನು ಹಾಕಿಕೊಂಡಿದ್ದರೋ, ಜೀವ ತೆಗೆದೇ ಬಿಟ್ಟರು ಎಂದು ಶಿವರಾಮನ ಪುಕಾರು. ನಂಬಿಕೆ.

‘ಅಷ್ಟು ಕಟುಕ್ರೇನ್ರೀ? ಸುಮ್ಸುಮ್ನೆ ಅಪವಾದ ಹೊರಿಸೋಕೆ ಹೋಗ್ಬೇಡಿ. ದೇವ್ರಿದ್ದಾನೇಂತಾದ್ರೆ ನೋಡಿಕೋತಾನೆ...’ ಸಹಿಸಲಾಗದ ತನ್ನ ಮನೋವ್ಯಥೆಯ ಮಧ್ಯೆಯೂ ಸೀತಾಲಕ್ಷ್ಮಿಗೆ ಗಂಡನ ಚಿಂತೆ. ಮಾಡಬಾರದ್ದೇನನ್ನಾದರೂ ಮಾಡಿಬಿಟ್ಟಾನೆಂಬ ಶಂಕೆ.

‘ಇದಕ್ಕೆಲ್ಲಾ ದೇವ್ರು ಯಾಕೆ ಬೇಕು? ನನ್ನ ರಟ್ಟೇಲಿ ಅಷ್ಟು ಶಕ್ತಿ ಉಂಟು. ಕುಡುಗೋಲು ಹರಿತ ಉಂಟು’ ಕಣ್ಣು ಮೆಡರಿಸುತ್ತಾ ಹೇಳುತ್ತಿದ್ದ ಶಿವರಾಮು. ಮಗನ ಪ್ರಾಣ ತೆಗೆದ ಕಪ್ಪು ಚುಕ್ಕೆ ಹೊಂದಿದ್ದ ಕುಡುಗೋಲನ್ನು ಅವನು ಮಸೆಗಲ್ಲಿಗೆ ಮಸೆದು ಮಸೆದು ಮತ್ತಷ್ಟು ಹರಿತ ಮಾಡಿಟ್ಟುಕೊಂಡಿದ್ದಲ್ಲದೆ ಸದಾ ಬ್ರಹ್ಮಕಪಾಲದಂತೆ ಕೈಯಲ್ಲಿ ಹಿಡಿದು ಓಡಾಡುವುದನ್ನು ನೋಡಿ ಸೀತಾಲಕ್ಷ್ಮಿಯ ಜೀವ ಬಾಯಿಗೆ ಬರುತ್ತಿತ್ತು. ಕೈಬಿಟ್ಟು ಹೋದವನ ನೆನಪಲ್ಲಿ ಒಂದು ಮೂಲೆಯಲ್ಲಿ ಕೂತು ಮನಸೋಇಚ್ಛೆ ಅಳುವುದಕ್ಕೂ ತೆರಪಿಲ್ಲದಂತೆ ಗಂಡನ ನಡತೆ ಕಂಗೆಡಿಸಿತ್ತು. ಹಿರಿಮಗನಿಗೆ ಫೋನು ಮಾಡಿ ಸಂಕಟ ತೋಡಿಕೊಳ್ಳುತ್ತಿದ್ದಳು ಸೀತಾಲಕ್ಷ್ಮಿ.

‘ನಂಗೆ ಹೆದ್ರಿಕೆಯಾಗುತ್ತೆ ಕಣೋ. ನಿಮ್ಮಪ್ಪನ್ನ ನೋಡಿದ್ರೆ ಮೈಮೇಲೆ ಬಂದವರ ಥರ ಕಾಣ್ತಾರೆ. ಒಂದು ಹೋಗಿ ಮತ್ತೊಂದಾದ್ರೆ ಜನರಿಗೆ ಮುಖ ತೋರಿಸೋಕಾಗುತ್ತಾ? ನೇಣು ಬಿಕ್ಕೊಂಡು ನಾವೂ ಸಾಯೋದೊಂದೇ ದಾರಿ...’

‘ಅಳ್ಬೇಡ ಅಮ್ಮಾ, ಏನಾರೂ ಮಾಡೋಣ. ನಾನು ಕೆಲಸ ಬಿಟ್ಟು ಅಲ್ಲಿಗೇ ಬಂದ್ಬಿಡ್ಲಾ? ನಿಮಗಿಂತಾ ಕೆಲಸ ಹೆಚ್ಚಲ್ಲ...’

‘ಮಾರಾಯಾ, ಹಂಗಿದ್ದೊಂದು ಮಾಡ್ಬೇಡ. ದಾಯಾದಿಗಳ ಮಧ್ಯ ಬದುಕು ಮಾಡೋ ಕಷ್ಟಾನ ಕೈಯಾರೆ ತಂದ್ಕಂಬೇಡ. ನೀನು ಎಷ್ಟು ದೂರ ಇರ್ತೀಯೋ ಅಷ್ಟು ಪರಮಸುಖ. ನಂಗಂತೂ ಸಾಕಾಗಿ ಹೋಗಿದೆ...’

‘ತಡಿ ಅಮ್ಮಾ, ಏನಾದ್ರೂ ಮಾಡೋಣ’ ಅಮ್ಮನನ್ನು ಸಂತೈಸುತ್ತಿದ್ದ ಪ್ರಸನ್ನ.

ಸೀತಾಲಕ್ಷ್ಮಿ ಗಂಡನನ್ನು ತಿದ್ದಲು ಹರಸಾಹಸಪಟ್ಟಳು. ‘ಮೂರು ಹೊತ್ತೂ ಕೈಲಿ ಕತ್ತಿ ಹಿಡ್ಕಂಡು ತಿರುಗಾಡ್ಬೇಡ್ರೀ. ಹೆದ್ರಿಕೆಯಾಗುತ್ತೆ ನಂಗೆ. ಎಲ್ಲಿಗಾರೂ ಹೋಗ್ಬೇಕೂಂತಾದ್ರೆ ಕತ್ತಿ ಮನೇಲಿಟ್ಟು ಹೋಗಿ...’

‘ಯಾಕೆ? ನನ್ನನ್ನೂ ಕಡಿದು ಕಾಲುವೆಗೆ ಬಿಸಾಕ್ಲಿ ಅಂತಾನಾ?’

‘ನಿಮ್ಮ ರಕ್ಷಣೆಗೆ ನೀವು ಕುಡುಗೋಲು ಹಿಡ್ಕಂಡ್ಹೋಗೋದಾ ಅಥವಾ’ ಅರ್ಧೋಕ್ತಿಯಲ್ಲಿ ನುಂಗಿಕೊಂಡಿದ್ದಳು ಸೀತಾಲಕ್ಷ್ಮಿ.

‘ಮೂರು ಹೊತ್ತೂ ಹೆದರಿ ಸಾಯ್ತಿರ್ತಿ ನೀನು. ಮಗನ ಜೀವ ತೆಗೆದೋರನ್ನ ಹಂಗೇ ಉಳಿಸಿದ್ರೆ ಅವನ ಆತ್ಮಕ್ಕೆ ಶಾಂತಿ ಸಿಗುತ್ತಾ? ಅವನಿಗೆ ಶಾಂತಿಯಾಗ್ಬೇಕು ಅಂದ್ರೆ ಬಲಿ ಕೊಡ್ಬೇಕು ಬಲಿ...’

‘ಅಯ್ಯೊ, ಕೊಲೆ ಮಾಡ್ತೀರಿ ಅಂತ್ಲೇ ಇಟ್ಕಳಾಣ. ನೀವು ಜೈಲಿಗೆ ಹೋಗಿ ಕೂತ್ರೆ ಮನೆ ಮರ್ಯಾದೆ ಏನಾಗುತ್ತೇಂತ ಯೋಚ್ನೆ ಮಾಡಿದೀರಾ?’

‘ಏನಾರೂ ಆಗ್ಲಿ, ಅದನ್ನ ಕಟ್ಗಂಡು ನಂಗೇನಾಗ್ಬೇಕು?’

‘ನೀವು ಕೊಲೆಪಾತಕಿ ಅಂತ ಜೈಲಿಗೆ ಹೋದ್ರೆ ಪ್ರಸನ್ನನ ಗತಿ ಏನ್ರೀ? ಅವನಿಗೆ ಯಾರು ಹೆಣ್ಣು ಕೊಡೋಕೆ ಬರ್ತಾರೆ? ಅವನ ಜೀವನಾನೂ ಹಾಳ್ಮಾಡಿಬಿಡ್ತೀರಾ? ಬುದ್ಧಿ ಎಲ್ಲಿಟ್ಟಿದೀರಿ?’

‘ಹೆಚ್ಚಿಗೆ ಬಾಯಿ ಮಾಡ್ಬೇಡ. ಹಿಂಗೆ ಹೆದರ್ಕಂತಾ ಹೋದ್ರೆ ಒಂದಿನ ಮನೆ ನುಗ್ಗಿ ನಮ್ಮನ್ನೂ ಹೊಡೆದು ಹಾಕ್ತಾರೆ’

‘ಅದಾದ್ರೂ ಒಂದು ಲೆಕ್ಕದಲ್ಲಿ ವಾಸಿ. ರಗಳೆ ತೀರ್ತೂಂತಾಗುತ್ತೆ...’

‘ಬಾಯ್ಮುಚ್ಕೊಂಡು ತೆಪ್ಪಗಿರು ಅಂದ್ನಲ್ಲ. ಕೈಗೆ ಬಳೆ ತೊಟ್ಗಂಡಿಲ್ಲ ನಾನು. ಏನ್ಮಾಡ್ಬೇಕೂಂತಿದೀನೋ ಅದನ್ನ ಮಾಡೇ ಸಿದ್ಧ...’

ಕೋರ್ಟನ್ನು ಎರಡನೇ ಮನೆ ಮಾಡಿಕೊಂಡ ಅನೇಕರಂತೆ ಶಿವರಾಮ ಕೂಡಾ ಜಿದ್ದು ತೀರಿಸಿಕೊಳ್ಳಲು ಏನು ಮಾಡುವುದಕ್ಕೂ ಸಿದ್ಧನಾಗಿದ್ದಾನೆ. ಮರ್ಯಾದೆ ಅನ್ನುವುದು ದೊಡ್ಡ ಪ್ರಶ್ನೆ ಅಲ್ಲ. ಹಟ, ಸೇಡು, ಅದೊಂದೇ ತಲೆಯಲ್ಲಿ ತುಂಬಿಕೊಂಡು ಮೊರೆಯುತ್ತಿದೆ. ಶಿವರಾಮ ಮಗನ ಸಾವಿನಿಂದ ಸೇಡಿನ ಕೈಗೆ ಬುದ್ಧಿ ಕೊಟ್ಟು ತಲೆ ಕೆಟ್ಟವನಂತೆ ಆಡುತ್ತಿದ್ದಾನೋ ಅಥವಾ ಈ ಸಾವು ಅವನೊಳಗೆ ತುಂಬಿಕೊಂಡಿದ್ದ ವಿಷವನ್ನು ಕಕ್ಕಲು ಒಂದು ಕಾರಣವಾಗಿದೆಯೋ ಗೊತ್ತಾಗುತ್ತಿಲ್ಲ ಸೀತಾಲಕ್ಷ್ಮಿಗೆ. ಎಂಥ ಚೆನ್ನಾಗಿದ್ದ ಹುಡುಗನನ್ನು ಕೊಲೆ ಮಾಡಿ ಬಿಸಾಕಿದರು ಅಂದರೆ ಪೂರ್ತಿ ನಂಬಲು ಅಂತರಂಗ ಸಿದ್ಧವಿಲ್ಲ. ಕೊಲೆ ಮಾಡುವುದೆಂದರೆ ಆಟವೇ? ಗಂಡನಿಗೆ ಹುಚ್ಚು ಹಿಡಿದಿದೆ ಅಥವಾ ಹಿಡಿಯುವುದರಲ್ಲಿದೆ ಎನ್ನುವ ಅವಳ ಭೀತಿಗೆ ಇಂಬು ಕೊಡುವಂತೆ ಶಿವರಾಮ ವಿಚಿತ್ರವಾಗಿ ನಡೆದುಕೊಳ್ಳುತ್ತಿದ್ದ. ಅವನ ಆಲೋಚನಾಕ್ರಮವೇ ದಿಕ್ಕು ತಪ್ಪಿ ಹೋಗಿತ್ತು.

***

ವಾರದ ಮಟ್ಟಿಗೆ ರಜಾ ಹಾಕಿ ಊರಿಗೆ